ಕರ್ನಾಟಕ ವಿಧಾನಸಭೆ

ಸೋಮವಾರ 28ನೇ ಫೆಬ್ರವರಿ 2011ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11.00 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು ಶ್ರೀ ಕೆ.ಜಿ. ಬೋಪಯ್ಯರವರು ಪೀಠವನ್ನು ಅಲಂಕರಿಸಿದ್ದರು

ಅಧ್ಯಕ್ಷರು: ಈಗ ಪ್ರಶ್ನೋತ್ತರ ಪ್ರಾರಂಭ ಮಾಡೋಣ.

1. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ

ವಿಷಯ: ರಾಜ್ಯದಲ್ಲಿ 2008 ಸೆಪ್ಟೆಂಬರ್ 14 ಮತ್ತು 15ರಂದು ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಚರ್ಚ್‌ಗಳ ಮೇಲೆ ಅಮಾನುಷವಾಗಿ ದಾಳಿಗಳು ನಡೆದ ಸಂದರ್ಭದಲ್ಲಿ ನೂರಾರು ಜನರು ಹಲ್ಲೆಗೆ ಈಡಾದ ಬಗ್ಗೆ ನ್ಯಾಯಮೂರ್ತಿ ಬಿ.ಕೆ. ಸೋಮಶೇಖರ್ ವಿಚಾರಣಾ ಆಯೋಗದ ವರದಿ ಬಗ್ಗೆ

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಏಕೋ ನೀವು ನಮಗೆ consider ಮಾಡುತ್ತಿಲ್ಲ. ಮಾನ್ಯ ಅಧ್ಯಕ್ಷರೆ, ನಾನು ನಿಯಮ 60ರ ಅಡಿಯಲ್ಲಿ ಒಂದು ಪ್ರಸ್ತಾವನೆ ಕೊಟ್ಟಿದ್ದೇನೆ.

ಅಧ್ಯಕ್ಷರು: ಪ್ರಶ್ನೋತ್ತರ ಆದ ಮೇಲೆ ತೆಗೆದುಕೊಳ್ಳೋಣ.

ಶ್ರೀ ಸಿದ್ದರಾಮಯ್ಯ: ಇಲ್ಲ, ಇಲ್ಲ, ಈಗಲೇ ತೆಗೆದುಕೊಳ್ಳಿ. ಅದು ಯಾವುದರ ಸಂಬಂಧ ಎಂದರೆ, ರಾಜ್ಯದಲ್ಲಿ 2008 ಸೆಪ್ಟೆಂಬರ್ 14 ಮತ್ತು 15 ಈ ಎರಡು ದಿನಗಳ ಕಾಲ ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಚರ್ಚ್‌ಗಳ ಮೇಲೆ ಅಮಾನುಷವಾಗಿ ದಾಳಿಗಳು ನಡೆದವು. ಆ ದಾಳಿ ಸಂದರ್ಭದಲ್ಲಿ ನೂರಾರು ಜನ ಹಲ್ಲೆಗೆ ಈಡಾದರು. ಚರ್ಚ್‌ಗಳಲ್ಲಿದ್ದ ಪಾದ್ರಿಗಳ ಮೇಲೆ ಮತ್ತು ನನ್‌ಗಳ ಮೇಲೆ ಬಹಳ ಅಗೌರವಯುತವಾಗಿ ಅತ್ಯಂತ ಅಮಾನವೀಯವಾಗಿ ನಡೆದು ಕೊಂಡಿರತಕ್ಕಂಥದ್ದು ಇಡೀ ರಾಜ್ಯದ ಜನರಿಗೆ ಗೊತ್ತಾಗಿದೆ. ಅದರ ಸಂಬಂಧ ಅವತ್ತು ಈ ವಿಚಾರ ಸದನದಲ್ಲಿ ಪ್ರಸ್ತಾಪ ಮಾಡಿದಾಗ ರಾಜ್ಯ ಸರ್ಕಾರ ಹೈಕೋರ್ಟ್‌ನ ನಿವೃತ್ತಿ ನ್ಯಾಯಾಧೀಶರಾದ ಸೋಮಶೇಖರ್‌ರವರ ಅಧ್ಯಕ್ಷತೆಯಲ್ಲಿ ಒಂದು ಜ್ಯುಡಿಷಿಯಲ್ ಕಮೀಷನ್ ಅನ್ನು ನೇಮಕ ಮಾಡಿದರು. ಅವರು ನೇಮಕ ಮಾಡಿದ ಮೇಲೆ ಒಂದು ಮಧ್ಯಂತರ ವರದಿಯನ್ನು ರಾಜ್ಯ ಸರ್ಕಾರಕ್ಕೆ ಕೊಡುತ್ತಾರೆ. ಆ ಮಧ್ಯಂತರ ವರದಿ ಕೊಟ್ಟದ್ದು 1-2-2010ರಂದು.

ಈ incident ಆದದ್ದು 2008 ಸೆಪ್ಟೆಂಬರ್ ತಿಂಗಳು 14 ಮತ್ತು 15 ಎರಡು ದಿನಗಳ ಕಾಲ ಉಡುಪಿಯಲ್ಲಿ, ಮಂಗಳೂರಿನಲ್ಲಿ, ಸೌತ್ ಕೆನರಾ ಜಿಲ್ಲೆಯಲ್ಲಿ, ದಾವಣಗೆರೆಯಲ್ಲಿ, ಚಿಕ್ಕಮಗಳೂರಿನಲ್ಲಿ, ಬೆಂಗಳೂರಿನಲ್ಲಿ, ಕೋಲಾರದಲ್ಲಿ ಮತ್ತು ಕೊಡಗಿನಲ್ಲಿ ಹೀಗೆ ಸುಮಾರು ಎಂಟು ಜಿಲ್ಲೆಗಳಲ್ಲಿ...

ಅಧ್ಯಕ್ಷರು: ನಮ್ಮ ಜಿಲ್ಲೆಯಲ್ಲಿ ನಡೆಯಲಿಲ್ಲ.

ಶ್ರೀ ಸಿದ್ದರಾಮಯ್ಯ: ನಿಮ್ಮ ಜಿಲ್ಲೆಯಲ್ಲಿ ಇದು ಆಗಲಿಲ್ಲವಾ? ಹಾಗಾದರೆ ನೀವು ಇದ್ದಿರಿ ಎಂದು ಅಲ್ಲಿ ಏನೂ ಆಗಲಿಲ್ಲವೆಂದು ಕಾಣುತ್ತದೆ. ಮೈಸೂರು ಸೇರಿದಂತೆ ಎಲ್ಲಾ ಕಡೆ ಚರ್ಚ್‌ಗಳ ಮೇಲೆ ಅವ್ಯಾಹತವಾಗಿ ದಾಳಿ ನಡೆದಿದೆ. ಈ ದಾಳಿ, it is well planned. ಬಹಳ ವ್ಯವಸ್ಥಿತವಾಗಿ ಮತ್ತು ಉದ್ದೇಶ ಪೂರ್ವಕವಾಗಿ ಭಾರತೀಯ ಜನತಾ ಪಕ್ಷದ ಸರ್ಕಾರ ಕರ್ನಾಟಕ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಮೇಲೆ ನಡೆದಂತಹ ದಾಳಿ ಇದು.

ಈ ದಾಳಿಯಲ್ಲಿ ಮಧ್ಯಂತರ ವರದಿಯಲ್ಲಿ ಹೇಳುವ ಪ್ರಕಾರ, ಮಹೇಂದ್ರಕುಮಾರ್ ಎಂದು ಹೇಳಿ ಭಜರಂಗದಳದ convener ...

ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಸಭಾಧ್ಯಕ್ಷರೆ, ಒಂದು ನಿಮಿಷ. I dono't want to interfere.

ಶ್ರೀ ಸಿದ್ದರಾಮಯ್ಯ: ನಾನು ಯಾವಾಗ ಮಾತನಾಡುವುದಕ್ಕೆ ಎದ್ದರೂ ನೀವು ಈ ರೀತಿ ಮಾಡುತ್ತೀರಿ. ಮಾನ್ಯ ಸಭಾಧ್ಯಕ್ಷರೆ ನಾನು yield ಆಗಿಲ್ಲ. ಎಲ್ಲಿದೆ point of order?

(ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): Enquiry Commission Report ಅದು ಇನ್ನೂ ಕ್ಯಾಬಿನೆಟ್‌ನಲ್ಲಿಯೂ ಕೂಡ ಇನ್ನೂ consider ಆಗಿಲ್ಲ. It has been laid before the Assembly. ಹೀಗಿರುವಾಗ ಯಾವ ರೀತಿ ನೀವು ಕೊಟ್ಟಂಥದ್ದು Adjournment Motion ಅಡಿಯಲ್ಲಿ ಬರುತ್ತದೆ?

Sri Siddaramaiah: It is not necessary.

Sri Suresh Kumar: No, no. It is necessary.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಅದರ ಬಗ್ಗೆ ನಾನು ಮಾತನಾಡಿದ ಮೇಲೆ ಹೇಳಲಿ. ನಾನು ಈಗ ನಿಮ್ಮ ಹತ್ತಿರ preliminary submission ಮಾಡುತ್ತಿದ್ದೇನೆ. I request you. Please allow me to submit my preliminary submission. ನಾನು ಇನ್ನೂ ತಮ್ಮ ಹತ್ತಿರ preliminary submission ಅನ್ನೇ ಇನ್ನೂ ಮಾಡಿಲ್ಲ. ಆಗಲೆ ಹೀಗೆ ಇವರು ಅಡ್ಡ ಬಂದರೆ ಹೇಗೆ?

ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): Commission of Enquiry Act ನಲ್ಲಿ it is very clear that, ಸರ್ಕಾರ ಆರು ತಿಂಗಳೊಳಗೆ ಅಸೆಂಬ್ಲಿಯಲ್ಲಿ ಇದನ್ನು lay ಮಾಡಬೇಕು. ಅದಕ್ಕಿಂತ ಮುಂಚೆ ಕ್ಯಾಬಿನೆಟ್ ಇದನ್ನು consider ಮಾಡಬೇಕು.

(ಗೊಂದಲ)

ಶ್ರೀ ಸಿದ್ದರಾಮಯ್ಯ: ನಿಯಮಾವಳಿ ಪ್ರಕಾರ ಅದನ್ನು ಇವರು ಸದನದ ಮುಂದೆ ಇಡಬೇಕು.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ನೋಡಿ ಈ ರೀತಿ ಎಲ್ಲರೂ ಒಟ್ಟಿಗೆ ಎದ್ದು ನಿಂತು ಅಸೆಂಬ್ಲಿ ನಡೆಸುವುದಕ್ಕೆ ಅಡ್ಡ ಬಂದರೆ ಹೇಗೆ? You please take a decision.

(ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ಅವರು ಕೊಟ್ಟಿರುವುದು ಬರಿ gist ಮಾತ್ರ. ಕಮಿಷನ್ ರಿಪೋರ್ಟ್ ಏನಿದೆ ಅದು ಇನ್ನೂ ಕೂಡ ಸಚಿವ ಸಂಪುಟದ ಅಧ್ಯಯನದ ಹಂತದಲ್ಲಿದೆ. It cannot become a subject matter under the Adjournment Motion.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಈಗ ನಾನು ಮಾತನಾಡಬೇಕೋ ಅಥವಾ ಅವರು ಮಾತನಾಡಬೇಕೋ ಎಂದು ನೀವೇ ಹೇಳಿ.

Sri S. Suresh Kumar: Let us not start a new precedent. It is a bad precedent. ದಯವಿಟ್ಟು ಬೇಡ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಇದೊಂದು ಹೊಸ ಸಂಪ್ರದಾಯವಾಗುತ್ತದಷ್ಟೆ.

ಶ್ರೀ ಸಿದ್ದರಾಮಯ್ಯ: ಭಾರತೀಯ ಜನತಾ ಪಕ್ಷದಲ್ಲಿ ಎಲ್ಲವೂ wrong precedent ಗಳೆ, ಇವರು ತೆಗೆದುಕೊಳ್ಳುವುದೆಲ್ಲ good precedent ಗಳೆ. What is this nonsense?

ಶ್ರೀ ಜಗದೀಶ್ ಶೆಟ್ಟರ್: ಜಸ್ಟೀಸ್ ಸೋಮಶೇಖರ್ ವರದಿ ಸದನದಲ್ಲಿ ಇನ್ನೂ lay ಆಗಿಲ್ಲ. ಕ್ಯಾಬಿನೆಟ್‌ನಲ್ಲಿ ಇನ್ನು ಅದರ ಬಗ್ಗೆ consider ಮಾಡಿಲ್ಲ.

ಶ್ರೀ ಸಿದ್ದರಾಮಯ್ಯ: Adjournment Motion move ಮಾಡಿರುವಾಗ, ಆಗಲೂ ಇವರು ಪ್ರತಿಯೊಂದು ವಿಚಾರದಲ್ಲಿಯೂ ನಾನು ಮಾತನಾಡುವಾಗ ಅಡ್ಡ ಬರುತ್ತಿದ್ದಾರೆ ಎಂದರೆ why should we come here?

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಸದನದಲ್ಲಿ ಇವರು ಹೊಸ ಸಂಪ್ರದಾಯ ಮಾಡುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ: ಏನು ಹೊಸ ಸಂಪ್ರದಾಯ? He will decide.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಜಸ್ಟೀಸ್ ಸೋಮಶೇಖರ್ ವರದಿ ಸದನದಲ್ಲಿ ಮಂಡನೆ ಆಗಿಲ್ಲ. Action taken Report ಕೂಡ ಇಲ್ಲದೇ ಮತ್ತು ಸದನದಲ್ಲಿ ಮಂಡನೆಯಾಗದೇ ಇರುವಂಥ ಪರಿಸ್ಥಿತಿಯಲ್ಲಿ ಅದರ ಬಗ್ಗೆ ಸದನದಲ್ಲಿ ಹೇಗೆ ಮಾತನಾಡುವುದಕ್ಕೆ ಬರುತ್ತದೆ? ನಾಳೆ ಸದನದಲ್ಲಿ ವರದಿ ಮಂಡನೆಯಾಗಲಿ. ಆಮೇಲೆ ಅದರ ಬಗ್ಗೆ ಚರ್ಚೆಗೆ ತಾವು ಅವಕಾಶ ಕೊಟ್ಟರೆ ಮಾತನಾಡಲಿ. ಮೊದಲು ಸದನದಲ್ಲಿ ಅದು ಮಂಡನೆಯಾಗಲಿ.

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರೆ, ಈಗ ನನಗೆ ಒಂದು ವಿಚಾರವನ್ನು clarify ಮಾಡಿ. This Adjournment Motion is on the basis of the so-called report, which is not before the Government ಎಂದು ಅವರು ಹೇಳುತ್ತಾರೆ. You are moving the adjournment motion on the basis of the report or the incident ಅದರ ಬಗ್ಗೆ ನೀವು ಕ್ಲಾರಿಫೈ ಮಾಡಿ.

Sri Siddaramaiah: I will clarify. I will convince your goodself.

ಶ್ರೀ ಎಸ್. ಸುರೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಕೆಟ್ಟ ಸಂಪ್ರದಾಯವನ್ನು ಪ್ರಾರಂಭ ಮಾಡುವುದು ಬೇಡ. Adjornment Motionಗೆ ಇದು ಬರುವುದಿಲ್ಲ. ಆ purviewನಲ್ಲಿ ಇದು ಬರುವುದಿಲ್ಲ.

ಒಬ್ಬ ಮಾನ್ಯ ಶಾಸಕರು: ಮಾನ್ಯ ಜಸ್ಟೀಸ್ ಸೋಮಶೇಖರ್‌ರವರು ವರದಿಯ ಬಗ್ಗೆ ಪ್ರೆಸ್‌ಗೆ release ಮಾಡಿದ್ದಾರೆ.

ಅಧ್ಯಕ್ಷರು: ಪ್ರೆಸ್ ಸ್ಟೇಟ್‌ಮೆಂಟ್ ಮೇಲೆ Adjournment Motion move ಮಾಡುವುದಕ್ಕಾಗುವುದಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರೆ, ತಾವು ಮಾತನ್ನು ಮುಕ್ತಾಯ ಮಾಡಿ.

ಶ್ರೀ ಎಸ್. ಸುರೇಶ್‌ಕುಮಾರ್: ರಿಪೋರ್ಟ್ ಇನ್ನೂ ಸದನದಲ್ಲಿ lay ಆಗಿಲ್ಲದಿರುವಾಗ how can this House allow this?

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, this is very bad. This is not the way.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು): ವಿರೋಧ ಪಕ್ಷದ ನಾಯಕರೆ, ಒಂದೇ ಒಂದು ನಿಮಿಷ. ನಾನು ಜಾಸ್ತಿ ಮಾತನಾಡುವುದಿಲ್ಲ. ಮಾನ್ಯ ಅಧ್ಯಕ್ಷರೆ, ನಾನು ಕೊನೇ ಪಕ್ಷ ಈ ಅಧಿವೇಶನದಿಂದಲಾದರೂ ಸಹ ಕೆಲವು ಹೊಸ ಸಂಪ್ರದಾಯಗಳನ್ನು ಹಾಕಿಕೊಳ್ಳೋಣ. ಎಲ್ಲದಕ್ಕೂ ವಿರೋಧ ಪಕ್ಷದವರಿಗೆ ಸಹಕರಿಸುವುದಕ್ಕೆ ನಾವು ಸಿದ್ಧರಿದ್ದೇವೆ. ಈ ನಮ್ಮ ವ್ಯವಸ್ಥೆ ಏನಿದೆ ಅದು ಜಾರಿಗೆ ಬಂದ ಮೇಲೆ ಈ ಸದನದಲ್ಲಿ ಎಂದಾದರೂ ರಿಪೋರ್ಟ್‌ನ್ನು ಸದನದಲ್ಲಿ ಮಂಡನೆ ಮಾಡುವುದಕ್ಕೆ ಮುಂಚೆ, ಕ್ಯಾಬಿನೆಟ್‌ನಲ್ಲಿ ರಿಪೋರ್ಟ್ ಬಗ್ಗೆ ನೋಡುವುದಕ್ಕೆ ಮುಂಚೆಯೇ ಚರ್ಚೆಯಾದಂಥ ಯಾವುದಾದರೂ ಒಂದು ಉದಾಹರಣೆ ಇದ್ದರೆ ಸನ್ಮಾನ್ಯ ಅಧ್ಯಕ್ಷರೆ, ತಾವು ಆ ಬಗ್ಗೆ ದಾಖಲೆಯನ್ನು ಪರಿಶೀಲನೆ ಮಾಡಿ ಆಮೇಲೆ ಬೇಕಾದರೆ ಅದರ ಬಗ್ಗೆ ರೂಲಿಂಗ್ ಕೊಡಿ. ಆದರೆ ಅದಕ್ಕೆ ಮುಂಚೆಯೇ ನಾವೇನಾದರೂ ಇಂಥ ಕೆಟ್ಟ ಸಂಪ್ರದಾಯಗಳನ್ನು ಹಾಕಿಕೊಂಡರೆ ತಪ್ಪಾಗುತ್ತದೆ. ಏಕೆಂದರೆ ಇಡೀ ದೇಶ ನೋಡುತ್ತಿದೆ. ಪಾರ್ಲಿಮೆಂಟ್‌ನಲ್ಲಿ ವ್ಯವಸ್ಥೆ ಇದೆ. ಬೇರೆ ಬೇರೆ ವಿಧಾನಮಂಡಲಗಳಲ್ಲಿ ಈ ವ್ಯವಸ್ಥೆ ಇದ್ದು ಅದು ನಡೆಯುತ್ತಿವೆ. ಇಂಥ ಒಂದು ಸಂದರ್ಭದಲ್ಲಿ ಯಾವ ಒಂದು Enquiry Commission Report ಇದೆ ಅದನ್ನು ಇನ್ನೂ ನಾವು ಸದನದಲ್ಲಿ ಮಂಡನೆ ಮಾಡಿಲ್ಲ ಮತ್ತು ಕ್ಯಾಬಿನೆಟ್ ಕೂಡ ಅದರ ಬಗ್ಗೆ ಇನ್ನೂ

ನೋಡಿಲ್ಲ. ಈ ಸದನದಲ್ಲಿ ಮಂಡನೆ ಮಾಡುವ ಮುಂಚೆಯೇ ಅದರ ಬಗ್ಗೆ ಸದನದಲ್ಲಿ ನಾವು ಪ್ರಶ್ನೆ ಮಾಡುತ್ತೇವೆ ಎಂದು ಹೇಳುವುದಾದರೆ ಇದಕ್ಕಿಂತ ಕೆಟ್ಟ ಸಂಪ್ರದಾಯ ಬೇರೆ ಯಾವುದೂ ಇಲ್ಲ. ಮಾನ್ಯ ಅಧ್ಯಕ್ಷರೆ, ಈ ಮನೆಯಲ್ಲಿ ಇಂಥವುಗಳಿಗೆ ನೀವು ದಯವಿಟ್ಟು ಅವಕಾಶವನ್ನು ನಿಮ್ಮ ಕಾಲದಲ್ಲಿ ಮಾಡಿಕೊಡಬೇಡಿ ಎಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ. ಯಾವುದಾದರೂ ರೂಲಿಂಗ್ ಇದ್ದರೆ ಹೇಳಿ. ಯಾವುದಾದರೂ ತೋರಿಸಿ. ಇಂಥದ್ದರ ಮೇಲೆ ನನಗೆ ಅಧಿಕಾರವಿದೆ, ನಾನು ಮಾತನಾಡುತ್ತಿದ್ದೇನೆ ಎಂದು ವಿರೋಧ ಪಕ್ಷದ ನಾಯಕರು ಹೇಳಿದರೆ ಮತ್ತು ಮಾನ್ಯ ಅಧ್ಯಕ್ಷರು ಅದನ್ನು ಒಪ್ಪುವುದಾದರೆ ನಮ್ಮದೇನೂ ಅಭ್ಯಂತರವಿಲ್ಲ. ಪ್ರಶ್ನೋತ್ತರ ಕಲಾಪವನ್ನೂ ಬದಿಗೊತ್ತಿ ಈ ರೀತಿಯ ಮೋಶನ್‌ಗೆ ಚರ್ಚೆ ಮಾಡುವುದಕ್ಕೆ ನೀವು ಅವಕಾಶ ಮಾಡಿಕೊಟ್ಟರೆ ಏನಾಗಬಹುದು ಎಂದು ಸಭಾಧ್ಯಕ್ಷರಾದ ತಾವೇ ಯೋಚನೆ ಮಾಡಿ ಸ್ವಾಮಿ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಭಾನಾಯಕರು ಮತ್ತು ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು...

ಅಧ್ಯಕ್ಷರು: Point of order ಅವರು ಎತ್ತಿದ್ದಾರಲ್ಲ, ಆ Point of order ಬಗ್ಗೆ ಹೇಳುತ್ತಿದ್ದೀರ?

ಶ್ರೀ ಸಿದ್ದರಾಮಯ್ಯ: Point of Order ಏನೂ ಅವರು ಎತ್ತಿಲ್ಲ. ಸುಮ್ಮನೇ ಹಾಗೆ intervene ಆಗಿದ್ದಾರಷ್ಟೆ.

Mr. Spéaker: No, it is nothing but a point of order.

ಶ್ರೀ ಸಿದ್ದರಾಮಯ್ಯ: ಪಾಯಿಂಟೂ ಇಲ್ಲ, ಆರ್ಡರೂ ಇಲ್ಲಾ ಅವರದರಲ್ಲಿ. ಮಾನ್ಯ ಅಧ್ಯಕ್ಷರೆ, ಈ ರಿಪೋರ್ಟ್ ಸದನದ ಮುಂದೆ ಸಬ್‌ಮಿಟ್ ಆಗಿಲ್ಲ, ಇನ್ನೂ ಈ ರಿಪೋರ್ಟ್ ಸರ್ಕಾರದಲ್ಲಿಯೇ ಇದೆ. ಸರ್ಕಾರಕ್ಕೆ ವರದಿ ಸಬ್‌ಮಿಟ್ ಆಗಿದೆ. ಆದುದರಿಂದ ಇದರ ಬಗ್ಗೆ ಇಲ್ಲಿ ಚರ್ಚೆಗೆ ಅವಕಾಶ ಮಾಡಿಕೊಟ್ಟರೆ ಇದೊಂದು ಕೆಟ್ಟ ಸಂಪ್ರದಾಯವಾಗುತ್ತದೆ ಎನ್ನತಕ್ಕಂಥದ್ದು ಅವರ objection ಆಗಿದೆ. ಜಸ್ಟೀಸ್ ಸೋಮಶೇಖರ್‌ರವರು ದಿನಾಂಕ 1–2–2010ರಂದು, ಅಂದರೆ ಈಗಾಗಲೇ ಒಂದುವರ್ಷವಾಗಿ ಹೋಗಿದೆ, ಈಗ ನಾವು ಫೆಬ್ರವರಿ 28ನೇ ದಿನಾಂಕದಲ್ಲಿದ್ದೇವೆ, ಅಂದರೆ ಒಂದು ವರ್ಷದ ಮೇಲಾಗಿದೆ, ಜಸ್ಟೀಸ್ ಸೋಮಶೇಖರ್‌ರವರೇ, ಆ ಮಧ್ಯಂತರ ವರದಿಯನ್ನು

ಪತ್ರಿಕಾ ಗೋಷ್ಠಿಯಲ್ಲಿ the synopsis of the report ಎಂದು ಹೇಳಿ ಬಿಡುಗಡೆ ಮಾಡಿದ್ದಾರೆ. Synopsis means the gist of the report ಎಂದು ಅವರೇ ಬಿಡುಗಡೆ ಮಾಡಿದ್ದಾರೆ. ಅದು ಎಲ್ಲಾ ಕಡೆ publish ಆಗಿದೆ, ಪತ್ರಿಕೆಗಳಲ್ಲಿ ಬಂದಿದೆ, ಟಿ.ವಿ.ಗಳಲ್ಲಿ ಬಂದಿದೆ. ಈಗಾಗಲೇ ಒಂದು ವರ್ಷವಾಗಿದೆ. ಇಡೀ ರಾಜ್ಯದ ಜನರಿಗೆ, ದೇಶದ ಜನರಿಗೆ ಈ ಸುದ್ದಿ ತಲುಪಿದೆ. ಅವರ ಮಧ್ಯಂತರ ವರದಿ ಏನು ಎಂಬುದರ ಬಗ್ಗೆ ಜನರಿಗೆ ಗೊತ್ತಾಗಿದೆ. ಈ ರಿಪೋರ್ಟ್ ನಿಮ್ಮ ಸರ್ಕಾರದ ಕೈಯಲ್ಲಿದೆ. ಮಾನ್ಯ ಅಧ್ಯಕ್ಷರೆ, ಆ ರಿಪೋರ್ಟ್‌ನ್ನು ಇವರು ಇವತ್ತಿನವರೆವಿಗೂ ಸದನದಲ್ಲಿ ಮಂಡಿಸಿಲ್ಲ. ಇದು ಮೊದಲನೆಯ ವಿಷಯ. ಇನ್ನು ಎರಡನೆಯದಾಗಿ, ಈಗ 2010 ಡಿಸೆಂಬರ್‌ನಲ್ಲಿ ಜಸ್ಟೀಸ್ ಸೋಮಶೇಖರ್‌ರವರು ಮತ್ತೆ ಫೈನಲ್ ವರದಿಯನ್ನು ಮಂಡಿಸಿದ್ದಾರೆ.

ಅಧ್ಯಕ್ಷರು: ಇವೆಲ್ಲಾ Adjournment Motionನಲ್ಲಿ ಬರುತ್ತದೆಯೆ ಎನ್ನುವುದನ್ನು ಕ್ಲಾರಿಫೈ ಮಾಡಿ.

ಶ್ರೀ ಸಿದ್ದರಾಮಯ್ಯ: ದಿನಾಂಕ 28–1–2011ರಲ್ಲಿ ಫೈನಲ್ ವರದಿಯನ್ನು ಮಂಡಿಸಿದ್ದಾರೆ. ಅದನ್ನೂ ಕೂಡ ಅವರು ಪ್ರೆಸ್‌ಗೆ ಇಡೀ ರಿಪೋರ್ಟ್‌ನ ಸಾರಾಂಶವನ್ನು, ಅವರು ಏನು ಶಿಫಾರಸ್ಸುಗಳನ್ನು ಮಾಡಿದ್ದಾರೆ ಅದನ್ನೂ, ಅವರ ಅಭಿಪ್ರಾಯಗಳನ್ನು, ಹೀಗೆ ಇವೆಲ್ಲವುಗಳನ್ನು ಜನರ ಮುಂದೆ ಪ್ರೆಸ್ ಮೂಲಕ ಇಟ್ಟು ಬಿಟ್ಟಿದ್ದಾರೆ. ಒಂದು ಕಡೆ ಮಧ್ಯಂತರ ವರದಿ ಕೂಡ ಇದೆ. ಇನ್ನೊಂದು ಕಡೆ ಫೈನಲ್ ರಿಪೋರ್ಟ್ ಕೂಡ ಇದೆ. ಈ Final Report ಗೂ ಮತ್ತು Mid-Term Report ಗೂ there is lot of inconsistencies and contradictions, Mid-Term Report ನಲ್ಲಿ ಭಜರಂಗದಳ, ಶ್ರೀರಾಮ ಸೇನೆ, ವಿಶ್ವಹಿಂದೂ ಪರಿಷತ್, ಇವರ ಕೈವಾಡವಿದೆ, ಇವರ ಚಿತಾವಣೆ ಮೇಲೆ ಅಟ್ಯಾಕ್ ಆಗಿರತಕ್ಕಂಥದ್ದು, ಮಹೇಂದ್ರಕುಮಾರ್ ಭಜರಂಗದಳದ ರಾಜ್ಯದ ಕನ್ವೀನರ್, ಅವರು ವಿಶ್ವ ಹಿಂದೂ ಪರಿಷತ್‌ನ...

ಅಧ್ಯಕ್ಷರು: ಮೆರಿಟ್ಸ್ ಬಗ್ಗೆ ಈಗ ಹೇಳುವುದು ಬೇಡ.

ಶ್ರೀ ಸಿದ್ದರಾಮಯ್ಯ: ಮೆರಿಟ್ಸ್ ಬಗ್ಗೆ ನಾನು ಹೇಳುತ್ತಿಲ್ಲ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ನಮ್ಮ ಆರ್ಗ್ಯುಮೆಂಟ್ ಏನೆಂದರೆ, ಆ ರಿಪೋರ್ಟ್ ಕ್ಯಾಬಿನೆಟ್‌ನಲ್ಲಿ ಇನ್ನೂ consider ಆಗಿಲ್ಲ. ಸದನದಲ್ಲಿ ಇನ್ನೂ ಅದು ಮಂಡನೆಯಾಗಿಲ್ಲ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, after my submission is over, you take a decision. ಆ ಮೇಲೆ ಮಾನ್ಯ ಅಧ್ಯಕ್ಷರೆ, ಇವರೇ ಜಿಲ್ಲಾಡಳಿತ, ಎಸ್.ಪಿ., ಡಿ.ಸಿ., ಅವರೂ ಕೂಡ ಇದರಲ್ಲಿ collude ಆಗಿದ್ದಾರೆ. ಈ ಮೂಲಭೂತವಾದಿಗಳ ಜೊತೆಯಲ್ಲಿ, ಜಾತಿವಾದಿಗಳ ಜೊತೆಯಲ್ಲಿ ಅವರೂ ಕೂಡ collude ಆಗಿದ್ದಾರೆ. ಡಿ.ಸಿ., ಎಸ್.ಪಿ., District Administration, ಹೀಗೆ ಇವರೆಲ್ಲರೂ ಕೂಡ collude ಆಗಿದ್ದಾರೆ ಎಂದು ಮಧ್ಯಮ ವರದಿಯಲ್ಲಿ ಅವರು ಹೇಳುತ್ತಿದ್ದಾರೆ. It is not my own statement. It is the report submitted by Justice Somashekar.

11.30 P.M.

Mr. Speaker: Whatever it is. You please convince.

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಅಧ್ಯಕ್ಷರೆ, ಅವರು ಹೇಳಿರುವ facts Adjournment Motionಗೆ ಬರುವುದೇ ಇಲ್ಲ. The very fact that, the facts reported by Hon'ble Opposition Leader, Adjournment Motion ಗೆ ಬರುವುದಿಲ್ಲ. ಅದಕ್ಕೆ ನೀವು allow ಮಾಡಿದ್ದೀರಾ ಹೇಗೆ?

Mr. Speaker: Do all these come under adjournment motion?

(ಗೊಂದಲ)

ಶ್ರೀ ಸಿದ್ದರಾಮಯ್ಯ: ಪುನಃ ಮತ್ತೆ ಹೇಳುತ್ತಾರೆ, fundamentalist ಮಾಡಿರುವುದಿಲ್ಲ. Then who are those fundamentalists? In the earlier Mid-Term report Bhajarand DAl...

(ಗೊಂದಲ)

ಅಧ್ಯಕ್ಷರು: ಇಲ್ಲಿ ಪ್ರಶ್ನೆ ಏನೆಂದರೆ merits ಬಗ್ಗೆ ಬೇಡ.

(ಗೊಂದಲ)

Sri Basavaraja Bommai: We are ready to discuss all aspects of that incident.

ಅಧ್ಯಕ್ಷರು: ಅಲ್ಲ, how it comes under Rule 60 ಎಂಬುದರ ಬಗ್ಗೆ ಹೇಳಬೇಕು.

Sri Siddaramaiah: Truth has not been established.

(ಗೊಂದಲ)

ಶ್ರಿ ಸಿದ್ದರಾಮಯ್ಯ: ಇಡೀ ಕರ್ನಾಟಕದ ಕ್ರಿಶ್ಚಿಯನ್ ಸಮುದಾಯ ಇವತ್ತು ಈ ರಿಪೋರ್ಟ್‌ಗಳ ವಿರುದ್ಧ ಅಂತಿಮ ವರದಿಯ ವಿರುದ್ಧ ಇಡೀ ರಾಜ್ಯದಲ್ಲಿ ಪ್ರತಿಭಟನೆ ಮಾಡಿದ್ದಾರೆ.

ಅಧ್ಯಕ್ಷರು: ಇದು ಹೇಗೆ ಬರುತ್ತದೆ?

(ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್: ಇದು public speech ಅಲ್ಲ. ಒಂದು parliamentary procedure, ಇದೆ.

ಶ್ರೀ ಸಿದ್ದರಾಮಯ್ಯ: ಎಲ್ಲಿದೆ? ನಿಮಗೆ ಸಿಬಿಐ ವರದಿ ಬಂದಿದೆ ಅಲ್ಲವೇ?

(ಗೊಂದಲ)

Mr. Speaker: That is a different issue. ಈಗ ತಾವೇನು ಕೊಟ್ಟಿದ್ದೀರಿ. how it comes under Rule 60?

Sri Siddaramaiah: That is not the point. My point is ಇವತ್ತು ರಾಜ್ಯದಲ್ಲಿ...

ಅಧ್ಯಕ್ಷರು: ಈಗ ಇದು Rule 60ನಲ್ಲಿ ಹೇಗೆ ಬರುತ್ತದೆಂದು ಹೇಳಿಬಿಡಿ. ನೀವು preliminary submissionನಲ್ಲಿ merits ಬಗ್ಗೆ ಎಲ್ಲಾ ಹೇಳುತ್ತಾ ಹೋದರೆ ಹೇಗೆ?

ಶ್ರೀ ಸಿದ್ದರಾಮಯ್ಯ: Rule 60ನಲ್ಲಿ ಹೇಗೆ ಬರುತ್ತದೆ ಎಂದು ಹೇಳುತ್ತೇನೆ.

ಅಧ್ಯಕ್ಷರು: ಅಷ್ಟನ್ನು ಹೇಳಿದರೆ ಸಾಕು.

(ಗೊಂದಲ)

ಶ್ರೀ ಆರ್. ಅಶೋಕ್: ಈಗ ವಿರೋಧ ಪಕ್ಷದ ನಾಯಕರಿಗೆ ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಕೊಟ್ಟಿದ್ದೀರಾ? ಅವರು ಭಜರಂಗದಳ, ಶ್ರೀರಾಮಸೇನೆ ಎಲ್ಲಾ ಹೇಳುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ: ನೀವು ಕೂಡ ಆ ಕ್ರಿಶ್ಚಿಯನ್ ಸಮುದಾಯದವರ ಹತ್ತಿರ, ಪ್ರತಿಭಟನೆ ಮಾಡುವವರ ಹತ್ತಿರ ನೀವೇ ಹೋಗಿ ಮನವಿಯನ್ನು ತೆಗೆದುಕೊಂಡು ಬಂದಿದ್ದೀರಿ. Is it not a fact?

ಶ್ರೀ ಆರ್. ಅಶೋಕ್: ಹೌದು ತೆಗೆದುಕೊಂಡು ಬಂದಿದ್ದೇನೆ.

ಶ್ರೀ ಎಸ್. ಸುರೇಶ್ ಕುಮಾರ್: ಈಗ ಅವರು ತೆಗೆದುಕೊಂಡಿರುವುದನ್ನು ಅವರೂ ಕೂಡ ಈಗ deny ಮಾಡುವುದಿಲ್ಲ. ಆದರೆ procedure ಅಂತ ಒಂದು ಇದೆ. ಇವರು ವಿರೋಧ ಪಕ್ಷದ ನಾಯಕರು 25 ವರ್ಷಗಳ ಅನುಭವವಿರುವವರು, ಇವರು ಈ ರೀತಿ ಮಾತನಾಡಿದರೆ ಹೇಗೆ? He cannot behave like this. ಮಾನ್ಯ ಅಧ್ಯಕ್ಷರೆ, I am on a point of order.

ಅಧ್ಯಕ್ಷರು: ಹೇಳಿ. ಅವರು point of order ಎತ್ತಿದ್ದಾರೆ. ಆ ಎರಡು ವಿಚಾರಕ್ಕೆ ಸೇರಿಸಿ ಉತ್ತರ ಹೇಳಿ.

ಶ್ರೀ ಎಸ್. ಸುರೇಶ್ ಕುಮಾರ್: Correct. Point ಇಲ್ಲ, Order ಇಲ್ಲ ಎನ್ನುವುದು ಬಹಳ ನಿಜ. ನಿಮ್ಮ ಪಾರ್ಟಿಯವರೇ ಒಪ್ಪಿಕೊಂಡಿದ್ದಾರಲ್ಲ. ಮಾನ್ಯ ಸಭಾಧ್ಯಕ್ಷರೆ, 'Matter must be definite' ಎಂದು ಇದೆ. 'An adjournment motion to discuss on enquiry report as a whole has been held as not relating to a specific matter'. ಈಗ ನಾವು ಆ ಒಂದು ಅಂತಿಮ ಹಂತಕ್ಕೆ ಮುಟ್ಟಿಲ್ಲ. ಮಧ್ಯಂತರ ವರದಿಯನ್ನು ಇಡೀ ದೇಶದಲ್ಲಿ ನೋಡಿದಾಗ ಯಾವುದೇ ವಿಧಾನಸಭೆಯಲ್ಲಿ ಅಥವಾ ಸಂಸತ್‌ನಲ್ಲಿ ಮಂಡಿಸಿರುವ ಉದಾಹರಣೆ ಇಲ್ಲ. ನಿಜ, ಒಂದು ವಿಚಾರ ಒಪ್ಪಿಕೊಳ್ಳುತ್ತೇನೆ. ಆಯೋಗದ ಮುಖ್ಯಸ್ಥರು ಪತ್ರಿಕೆಗಳ ಮೂಲಕ ಈ ರೀತಿಯಾಗಿ ತಮ್ಮ ಅಭಿಪ್ರಾಯವನ್ನು gist ರೀತಿಯಲ್ಲಿ ಕೊಟ್ಟು ಒಂದು ಹೊಸ ಸಂಪ್ರದಾಯವನ್ನು ಹಾಕಿದ್ದಾರೆ. ಅದರ ಬಗ್ಗೆ ನಾನೇನೂ comment ಮಾಡುವುದಿಲ್ಲ. ಆದರೆ ಮಾನ್ಯ ಸಿದ್ದರಾಮಯ್ಯ ಹಾಗೂ ಜಾರ್ಜ್ ಅವರ ವಿಚಾರವನ್ನು ಒಪ್ಪಿಕೊಳ್ಳುತ್ತೇನೆ. ನೀವಾದರೂ ಅರ್ಥ ಮಾಡಿಕೊಳ್ಳಿ. ನೀವು ಹೇಳಿದ ಹಾಗೆ ಕಳೆದ ವರ್ಷ ಒಂದು ಮಧ್ಯಂತರ ವರದಿಯನ್ನು ಕೊಟ್ಟರು. ಈ ಜನವರಿ 28ನೇ ತಾರೀಖು ಒಂದು ವರದಿ ಕೊಟ್ಟರು. ತಾವು ಹೇಳಿದ ಹಾಗೆ ಮಾನ್ಯ ಮುಖ್ಯಮಂತ್ರಿಗಳು, ಗೃಹ ಸಚಿವರು, ನಾವೆಲ್ಲ ತೆಗೆದುಕೊಂಡೆವು. ಆದರೆ procedure ಏನು? ಆ ವರದಿಯನ್ನು ಸಚಿವ ಸಂಪುಟ ಸಭೆಯಲ್ಲಿ we should consider it. ಆಮೇಲೆ ಅದನ್ನು ಅಸೆಂಬ್ಲಿಯಲ್ಲಿ

lay ಮಾಡಿದಾಗ that will become the property of the Houses. Now, until and unless Government has considered or taken some decision, it cannot be considered as a final report. ಅವರು ಶಿಫಾರಸ್ಸು ಮಾಡಿದ್ದಾರೆ. ಅದನ್ನು ನಾವು ಇಲ್ಲಿ ಚರ್ಚೆ ಮಾಡಿ, ಸಾರ್ವಜನಿಕ ಭಾಷಣ ಮಾಡಿ, xxxx xxxx ಮಾಡಿ ಏನು ಮಾಡುವುದಕ್ಕೆ ಹೋಗುತ್ತಿದ್ದೀರಿ?

(ಗೊಂದಲ)

ಶ್ರೀ ಆರ್. ರೋಷನ್ ಬೇಗ್: ಮಾನ್ಯ ಅಧ್ಯಕ್ಷರೆ, it is should be expunged.

ಅಧ್ಯಕ್ಷರು: ಅದನ್ನು ಕಡತದಿಂದ ತೆಗೆದು ಹಾಕುತ್ತೇನೆ.

(ಗೊಂದಲ)

ಮಾನ್ಯ ಸದಸ್ಯರು: ಇದು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಅವಮಾನ.

ಶ್ರೀ ಆರ್. ರೋಷನ್ ಬೇಗ್: ಲಾ ಮಿನಿಸ್ಟರ್ ಬಾಯಿಗೆ ಬಂದ ಹಾಗೆ ಮಾತನಾಡಿದರೆ ಹೇಗೆ?

ಶ್ರೀ ಸಿದ್ದರಾಮಯ್ಯ: ನಾನು ಇದನ್ನು ತೀವ್ರವಾಗಿ ಖಂಡಿಸುತ್ತೇನೆ. xxxx xxxx ಎಂದರೆ ಏನು? what does it mean ಹಾಗೆಂದರೆ ಏನು?

ಅಧ್ಯಕ್ಷರು: ಆಯಿತು, ಅದನ್ನು ಕಡತದಿಂದ ತೆಗೆಸುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್: ಏನಿಲ್ಲ, procedure ಬಿಟ್ಟು ಈ ರೀತಿ ಪುಂಖಾನುಪುಂಖವಾಗಿ ಹೇಳುತ್ತಾ ಹೋಗುವುದಿದೆಯಲ್ಲ, that is called xxxx xxxx.

ಶ್ರೀ ಸಿದ್ದರಾಮಯ್ಯ: ಯಾವ Ruleನಲ್ಲಿ ಇದೆ.

ಅಧ್ಯಕ್ಷರು: ಈಗ ಅದನ್ನು ರೆಕಾರ್ಡ್‌ನಿಂದ ತೆಗೆದು ಹಾಕಿದ್ದೇನೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೇ, ಬಹಳ ಹಗುರವಾಗಿ ಮಾತನಾಡಿದ್ದಾರೆ, ಜೊತೆಗೆ...

---

xxxx ಮಾನ್ಯ ಸಭಾಧ್ಯಕ್ಷರ ಆದೇಶದಂತೆ ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ಎಸ್. ಸುರೇಶ್ ಕುಮಾರ್: ನಾನು ಹಗುರವಾಗಿ ಖಂಡಿತ ಮಾತನಾಡಿಲ್ಲ.

(ಗೊಂದಲ)

ಅಧ್ಯಕ್ಷರು: ಅದನ್ನು ಕಡತದಿಂದ ತೆಗೆದು ಹಾಕಿದ್ದೇನೆ.

ಶ್ರೀ ಸಿದ್ಧರಾಮಯ್ಯ: ಹೇಳಲಾ, xxx xxx ಎಂದರೆ ಏನು ತಿಳಿದುಕೊಂಡು ಬಿಟ್ಟಿದ್ದೀರಾ? What does it mean?

Mr. Speaker: I have removed it.

ಶ್ರೀ ಸಿದ್ದರಾಮಯ್ಯ: ಸ್ವಾತಂತ್ರ್ಯ ಹೋರಾಟಗಾರರೆಲ್ಲ ಅಲ್ಲಿ ಹೋಗಿ ಭಾಷಣ ಮಾಡುತ್ತಿದ್ದರು. ಅವೆಲ್ಲ xxx xxx ಅವೆಲ್ಲ ಕೆಟ್ಟ ಭಾಷಣಗಳೇ?

ಶ್ರೀ ಎಸ್. ಸುರೇಶ್‌ಕುಮಾರ್: ನೀವು ಕೆಟ್ಟ ಭಾಷಣ ಎಂದು ಹೇಳುತ್ತಿರುವುದು.

ಶ್ರೀ ಸಿದ್ದರಾಮಯ್ಯ: ನೀವು ಯಾವತ್ತೂ ಸ್ವಾತಂತ್ರ್ಯಕ್ಕೋಸ್ಕರ ಹೋರಾಟ ಮಾಡಿಲ್ಲವಲ್ಲ.

ಶ್ರೀ ಎಸ್. ಸುರೇಶ್ ಕುಮಾರ್: ನೀವು ಮಾಡಿದ್ದೀರಾ?

ಶ್ರೀ ಸಿದ್ದರಾಮಯ್ಯ: ನಾನು ಮಾಡಿಲ್ಲ, ನಮ್ಮ ಪಕ್ಷ ಮಾಡಿದೆ. ಕಾಂಗ್ರೆಸ್ ಪಕ್ಷ ಮಾಡಿದೆ, ನೀವು ಏನು ಮಾಡಿದ್ದೀರಿ?

ಶ್ರೀ ಎಸ್. ಸುರೇಶ್ ಕುಮಾರ್: ಈ ಪಕ್ಷ ನನಗೆ ಎರಡನೇ ಸ್ವಾತಂತ್ರ್ಯ ಯುದ್ಧ ಮಾಡುವುದಕ್ಕೆ ಅವಕಾಶ ಕೊಟ್ಟಿದೆ. ನಿಮ್ಮ ಪಕ್ಷ ನಮ್ಮನ್ನು ಜೈಲಿಗೆ ಹಾಕಿದೆ. ನಿಮ್ಮ ಪಕ್ಷದಿಂದ ನೀವು ಹೋಗಿದ್ದೀರಾ?

ಶ್ರೀ ಸಿದ್ದರಾಮಯ್ಯ: ನಾನೂ ಜೈಲಿಗೆ ಹೋಗಿದ್ದೇನೆ.

(ಗೊಂದಲ)

ಅಧ್ಯಕ್ಷರು: ಯಾವುದೂ ದಾಖಲೆಗೆ ಹೋಗಬಾರದು.

(ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರ ಆದೇಶ ಮೇರೆಗೆ ನಡವಳಿ ದಾಖಲು ಮಾಡಲಿಲ್ಲ)

---

xxxx ಮಾನ್ಯ ಸಭಾಧ್ಯಕ್ಷರ ಆದೇಶದಂತೆ ಕಡತದಿಂದ ತೆಗೆದು ಹಾಕಲಾಗಿದೆ.

(ಗೊಂದಲ)

ಅಧ್ಯಕ್ಷರು: ಕಡತದಿಂದ ತೆಗೆಸಿದ್ದೇನೆ.

(ಗೊಂದಲ)

ಅಧ್ಯಕ್ಷರು: ದಯವಿಟ್ಟು ಈಗ ಇದನ್ನು ಮುಗಿಸೋಣ.

ಶ್ರೀ ವಿ. ಸೋಮಣ್ಣ: ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ನಾವು ಸಾಕಷ್ಟು ನೋಡುತ್ತಿದ್ದೇವೆ. ಮಾನ್ಯ ವಿರೋಧ ಪಕ್ಷದ ನಾಯಕರಾಗಿ ಮಾತನಾಡತಕ್ಕಂಥ ಸಂದರ್ಭದಲ್ಲಿ ಸ್ವಲ್ಪ ಅವರು ದಯಮಾಡಿ ಅರಿತುಕೊಳ್ಳಬೇಕಾಗುತ್ತದೆ. ಅದು ಬಿಟ್ಟು, ಏನೂ ಕಾಣದ ಈ ದೇಶದಲ್ಲಿ ಇವತ್ತು ನಡೆಯದಿರುವಂತಹ ವಿಷಯವನ್ನು ಎತ್ತಿಕೊಂಡು, ಅದು ಇನ್ನೂ ಮಂಡನೆಯಾಗಿಲ್ಲ. ಮಾನ್ಯ ಸುರೇಶ್ ಕುಮಾರ್‌ರವರು ಕಾನೂನು ಚೌಕಟ್ಟಿನಲ್ಲಿ ಏನು ಮಾತನಾಡಬೇಕೆಂದು ಹೇಳಿದ್ದು. ಅದು ಬಿಟ್ಟು ನೀವು ಏನೇನೋ ಮಾತನಾಡುತ್ತೀರಿ. ನೀವು ಏನು ಬೇಕಾದರೂ ಮಾತನಾಡಬಹುದೇ?

ಅಧ್ಯಕ್ಷರು: ದಯವಿಟ್ಟು ಕುಳಿತುಕೊಳ್ಳಿ. Rule 60ಗೆ ಸಂಬಂಧಪಟ್ಟಂತೆ ಮಾತನಾಡಿ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, Rule 60 ಏನು ಹೇಳುತ್ತದೆ ಎಂದರೆ 'A motion for an adjournment of the business of the House for the purpose of discussing a definite matter.' Here a definite matter is, ಇವತ್ತು ಶ್ರೀ ಸೋಮಶೇಖರ್‌ರವರು ಎರಡು ವರದಿಗಳನ್ನು ಸರ್ಕಾರಕ್ಕೆ ಮಂಡಿಸಿದ ಮೇಲೆ, ಆ ರಿಪೋರ್ಟ್‌ನಲ್ಲಿ contradictions ಇರುವುದರಿಂದ, ಅದು ಇಡೀ ರಾಜ್ಯದ ಜನತೆಗೆ ಗೊತ್ತಾಗಿರುವುದರಿಂದ, ಮಧ್ಯಮಾವಧಿ ವರದಿಯಲ್ಲಿ ಮತ್ತು ಫೈನಲ್ ವರದಿಯಲ್ಲಿ lot of inconsistencies and contradicitions are there. ಅದು ಆಗಿ ಇವತ್ತು ಇಡೀ ರಾಜ್ಯ ಮತ್ತು ದೇಶದ ಜನರಿಗೆ ಗೊತ್ತಾಗಿದೆ. ಅದರಿಂದ ಇವತ್ತು ಕ್ರಿಶ್ಚಿಯನ್ ಕಮ್ಯೂನಿಟಿಯವರು ಬಹಳ ನೊಂದು, ನಮಗೆ ಈ ಸರ್ಕಾರದಲ್ಲಿ ನ್ಯಾಯ ಸಿಗಲಿಲ್ಲ, ಸೋಮಶೇಖರ್ ಕಮಿಷನ್‌ನಿಂದ ನ್ಯಾಯ ಸಿಗಲಿಲ್ಲವೆಂದು ಒಂದು ಚಳುವಳಿಯನ್ನು ಪ್ರಾರಂಭ ಮಾಡಿದ್ದಾರೆ. That is the defnite matter to be discussed here. They are insecured. ಈ ಸರ್ಕಾರದಲ್ಲಿ ನಮಗೆ ರಕ್ಷಣೆ ಇಲ್ಲ. ಈ ಸರ್ಕಾರ ಕೋಮುವಾದಿಗಳಿಗೆ ಅವಕಾಶ ಕೊಡುತ್ತಿದೆ.

ಶ್ರೀ ಆರ್. ಅಶೋಕ್: ಮಾನ್ಯ ಅಧ್ಯಕ್ಷರೆ ಇದು ಮತ್ತೆ ಚರ್ಚೆಗೆ ಹೋಗುತ್ತಿದೆ.

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಅಧ್ಯಕ್ಷರೆ, ಇದಕ್ಕೆ ಅವಕಾಶ ಕೊಡಬಾರದು.

ಮಾನ್ಯ ಅಧ್ಯಕ್ಷರೆ, ಅವರು ನಿರಾಧಾರ ಆರೋಪ ಮಾಡಿದ್ದಾರೆ. ಅದನ್ನು ಕಡತದಿಂದ ತೆಗೆಸಬೇಕು.

ಅಧ್ಯಕ್ಷರು: ಎರಡೂ ಕಡೆಯ ನಾಯಕರು ಆಡಿದ ಮಾತುಗಳನ್ನು ಕೇಳಿದ್ದೇನೆ. ಇಂದು ಮಧ್ಯಾಹ್ನದೊಳಗೆ ಆದೇಶ ಪ್ರಕಟಿಸುತ್ತೇನೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಅವರು ಭಯದ ವಾತಾವರಣದಲ್ಲಿ ಬದುಕುತ್ತಿದ್ದಾರೆ. ಇಂಥ ಪರಿಸ್ಥಿತಿ ನಿರ್ಮಾಣವಾಗಿದೆ, ಇಂಥ ಪರಿಸ್ಥಿತಿಗೆ ಯಾರು ಕಾರಣ? The Government is responsible. It has failed.

ಶ್ರೀ ಬಸವರಾಜ ಬೊಮ್ಮಾಯಿ: ಕಾಂಗ್ರೆಸ್ ಸರ್ಕಾರ ಆಡಳಿತದಲ್ಲಿದ್ದಾಗ ಕೋಮು ಗಲಭೆಯಾಗಿ ನೂರಾರು ಜನರು ಸತ್ತರು. ಮಾನ್ಯ ವೀರೇಂದ್ರ ಪಾಟೀಲ್‌ರವರು ಇದ್ದಾಗ ಕಾಂಗ್ರೆಸ್ ಪಕ್ಷದವರು ರಾಮನಗರ, ಚನ್ನಪಟ್ಟಣದಲ್ಲಿ ನೂರಾರು ಜನರನ್ನು ಕೊಂದಿದ್ದೀರಿ. ಕಾಂಗ್ರೆಸ್ ಸರ್ಕಾರದಲ್ಲಿ ನೂರಾರು ಜನ ಅಲ್ಪಸಂಖ್ಯಾತರನ್ನು ಕೊಂದು ಅವರ ಗೋರಿ ಮೇಲೆ ನೀವು ಆಡಳಿತವನ್ನು ಮಾಡಿದ್ದೀರಿ. ನಿಮಗೆ ನಾಚಿಕೆ ಆಗುವುದಿಲ್ಲವೇ? You have killed innocent people. Congress Government has killed innocent minorities and ruled over their dead bodies.

(ಗೊಂದಲ)

ಅಧ್ಯಕ್ಷರು: ನಾನು ಎರಡೂ ಕಡೆಯ ನಾಯಕರುಗಳು ಆಡಿದ ಮಾತುಗಳನ್ನು ಕೇಳಿದ್ದೇನೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಸಲ್ದಾನರವರು Retired Judge of the High Court, ಅವರು ಕೊಟ್ಟಂಥ ವರದಿ, ಇವೆಲ್ಲವೂ ಇವತ್ತು ರಾಜ್ಯದ ಜನರ ಮುಂದಿದೆ.

ಅಧ್ಯಕ್ಷರು: ನಾನೂ ಇನ್ನು ಚರ್ಚೆಗೆ ಅವಕಾಶ ಕೊಡದೇ, ಎಲ್ಲಾ ವಿಚಾರಗಳನ್ನು ಹೇಳಿದರೆ ಹೇಗೆ? ಕಡತಕ್ಕೆ ಹೋಗಬಾರದೆಂದು ನಾನು ಹೇಳಬೇಕಾಗುತ್ತದೆ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ: ಇವತ್ತು ರಾಜ್ಯದ ಜನರ ಮುಂದೆ ಎಲ್ಲವೂ ಇದೆ. ಕ್ಷುಲ್ಲಕ ರಾಜಕಾರಣಕ್ಕಾಗಿ ವೀರೇಂದ್ರ ಪಾಟೀಲ್ ಬದಲಿಸುವುದಕ್ಕೋಸ್ಕರ ನೂರಾರು ಜನ ಮುಸಲ್ಮಾನರುಗಳನ್ನು ಕೊಂದಿದ್ದೀರಿ. ನಿಮಗೆ ನಾಚಿಕೆ ಆಗುವುದಿಲ್ಲವೇ? ಕ್ಷುಲ್ಲಕ ರಾಜಕಾರಣಕ್ಕಾಗಿ ಕೋಮುಗಲಭೆ ಎಬ್ಬಿಸಿ ನೂರಾರು ಜನ ಅಲ್ಪಸಂಖ್ಯಾತರನ್ನು ಕೊಂದಿದ್ದೀರಿ. ಆದ್ದರಿಂದ ಇಲ್ಲಿ ನಿಮಗೆ ಯಾವ ನೈತಿಕ ಹಕ್ಕು ಇದೆ? You don't have moral right to speak. ನಿಮಗೆ ನಾಚಿಕೆ ಬರಬೇಕು. ನಿಮಗೆ ಮಾರಲ್ ರೈಟೇ ಇಲ್ಲ. ರಾಮನಗರ, ಚನ್ನಪಟ್ಟಣದಲ್ಲಿ ಕೋಮು ಗಲಭೆ ಎಬ್ಬಿಸಿದ್ದೀರಿ, ರಕ್ತ ಹರಿಸಿದ್ದೀರಿ, ಹೆಣ ಮಲಗಿಸಿದ್ದೀರಿ, ಅವರ ಗೋರಿ ಮೇಲೆ ಆಡಳಿತವನ್ನು ಮಾಡಿದ್ದೀರಿ. Are you not ashamed?

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ: ಸಿದ್ದರಾಮಣ್ಣನವರೆ, ನೀವೆ ಅದರ ಬಗ್ಗೆ ಅಟ್ಯಾಕ್ ಮಾಡಿದ್ದಿರಿ. Vote bank ರಾಜಕಾರಣ ನಡೆಯುವುದಿಲ್ಲ ಸಿದ್ದರಾಮಯ್ಯನವರೆ, You are going to fail once again miserably. All Christians, all Muslims, are all for the Government, they are all for us. The days are gone. Don't try to paly old game.

ಅಧ್ಯಕ್ಷರು: ನಾನು ಎರಡೂ ಕಡೆ ನಾಯಕರು ಅಡಿದ ಮಾತುಗಳನ್ನು ಆಲಿಸಿದ್ದೇನೆ. ತೀರ್ಪನ್ನು ಕಾಯ್ದಿರಿಸಲಾಗಿದೆ. ನಾನು in th meanwhile ಆದೇಶವನ್ನು ಮಾಡುತ್ತೇನೆ.

ಶ್ರೀ ಬಂಡೆಪ್ಪ ಕಾಶೆಂಪೂರ್: ಮಾನ್ಯ ಅಧ್ಯಕ್ಷರೆ, ನಮ್ಮದು ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ.

ಅಧ್ಯಕ್ಷರು: ಎರಡು adjournment motionಗೆ no chance. No chance for two adjournment motions. ನೀವು ನಿಲುವಳಿ ಸೂಚನೆಯನ್ನು ಕೊಟ್ಟಿರಬಹುದು, there is no chance for two adjournment motions.

Please ಕುಳಿತುಕೊಳ್ಳಿ. ಎರಡು adjournment motion ಕೊಡುವುದಕ್ಕೆ ಅವಕಾಶ ಎಲ್ಲಿದೆ? ಎರಡು adjournment motion raise ಮಾಡುವುದಕ್ಕೆ there is no chance. ಈಗ ನಾನು ಎರಡೂ ಕಡೆಗಳಲ್ಲಿ ಆಡಿದ ಮಾತುಗಳನ್ನು ಕೇಳಿದ್ದೇನೆ. ಈಗ ಮಾನ್ಯ Parliament Affairs Ministerರವರ point of order ಎತ್ತಿದ್ದಾರೆ. ತೀರ್ಮ ಕಾಯ್ದಿರಿಸಲಾಗಿದೆ, ಮಧ್ಯಾಹ್ನದೊಳಗೆ ನಾನು ಅದನ್ನು ನೋಡಿ ಆದೇಶ ಮಾಡುತ್ತೇನೆ.

(ಗೊಂದಲ)

ಶ್ರೀ ಬಂಡೆಪ್ಪ ಕಾಶೆಂಪೂರ್: ಮಾನ್ಯ ಅಧ್ಯಕ್ಷರೆ, ನಾವು ನಮ್ಮ ಪಕ್ಷದ ಪರವಾಗಿ ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ. ನಮಗೆ ಎರಡು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು: Joint ಆಗಿ ಕೊಟ್ಟಿಲ್ಲ, ಅವರು separate ಆಗಿ ಕೊಟ್ಟಿದ್ದಾರೆ.

ಶ್ರೀ ಬಂಡೆಪ್ಪ ಕಾಶಂಪೂರ್: ಆಯಿತು, ಎರಡು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು: ಎರಡು ನಿಲುವಳಿ ಸೂಚನೆಗೆ ಅವಕಾಶ ಎಲ್ಲಿದೆ?

ಶ್ರೀ ಬಂಡೆಪ್ಪ ಕಾಶೆಂಪೂರ್: ನಾವು ಕೊಟ್ಟಿದ್ದೇವೆ.

ಅಧ್ಯಕ್ಷರು: ನೀವು ಕೊಟ್ಟ ತಕ್ಷಣ ಅವಕಾಶ ಕೊಡಬೇಕೆಂದು ಏನಾದರೂ ಇದೆಯಾ? ಯಾವ rule ಪ್ರಕಾರ ಇದೆಯೆಂಬುದನ್ನು ಹೇಳಿ. ನೀವು ಕೊಟ್ಟಿದ್ದೀರಿ, ಆದರೆ ಎರಡು ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳುವುದಕ್ಕೆ ನಿಯಮಾವಳಿಯಲ್ಲಿ ಅವಕಾಶವಿಲ್ಲ, ಹಾಗಾಗಿ ತಿರಸ್ಕರಿಸಿದ್ದೇನೆ. ತಾವು ಕೊಟ್ಟ ನಿಲುವಳಿ ಸೂಚನೆ ತಿರಸ್ಕೃತವಾಗಿದೆ, ಅವಕಾಶವಿಲ್ಲ.

ಶ್ರೀ ಬಂಡೆಪ್ಪ ಕಾಶೆಂಪೂರ್: ಮಾನ್ಯ ಅಧ್ಯಕ್ಷರೆ, ನಮಗೆ ಎರಡು ನಿಮಿಷ ಅವಕಾಶ ಕೊಡಿ, submit ಮಾಡುತ್ತೇವೆ.

ಅಧ್ಯಕ್ಷರು: ನಾನು ಅವಕಾಶವಿಲ್ಲವೆಂದು ಹೇಳಿದ್ದೇನೆ, ಮತ್ತೆ ಹೇಳಿದರೆ ದಾಖಲೆಗೆ ಹೋಗಬಾರದೆಂದು ಹೇಳುತ್ತೇನೆ.

ಶ್ರೀ ಬಂಡೆಪ್ಪ ಕಾಶೇಂಪೂರ್: ಮಾನ್ಯ ಅಧ್ಯಕ್ಷರೆ, ಇಂಥ ಒಂದು ಮಹತ್ವವಾದಂಥ ವಿಚಾರ ಚರ್ಚೆಯಾಗಬೇಕು.

ಅಧ್ಯಕ್ಷರು: ನಾಲ್ಕಾರು ಇರಬಹುದು, ನಾನು ಈಗಾಗಲೇ ಎಲ್ಲವನ್ನು ಕೇಳಿ, ಆದೇಶ ಮಾಡುತ್ತೇನೆಂದು ಹೇಳಿದ್ದೇನೆ, ಮತ್ತೆ ಮತ್ತೆ submit ಮಾಡುವ ಅವಕಾಶ ಬೇಡ. ಪ್ರಶ್ನೋತ್ತರವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಬಂಡೆಪ್ಪ ಕಾಶೆಂಪೂರ್: ಮಾನ್ಯ ಅಧ್ಯಕ್ಷರೆ, ಎರಡು ನಿಮಿಷ ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು: ನೀವು merit ಮೇಲೆ ಹೇಳುವುದು ಬೇಡ. ಈಗ ತೆಗೆದುಕೊಂಡಿದ್ದೇನೆ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ: ಕರ್ನಾಟಕ ಇತಿಹಾಸದಲ್ಲಿ ಯಾವ್ಯಾವ ಕೇಲದಲ್ಲಿ ಏನೇನು ಆಯಿತು, ಯಾರ್ಯಾರು ಕಾರಣಕರ್ತರು, ಯಾವ ರಾಜಕೀಯ ಕಾರಣಕ್ಕೆ ಆಯಿತು, ಯಾವ್ಯಾವ ಮುಖ್ಯಮಂತ್ರಿಗಳನ್ನು ತೆಗೆಯುವುದಕ್ಕೆ ಬಂದರು, ಏನೇನು ಆಯಿತೆಂಬುದೆಲ್ಲವನ್ನು ಹೇಳಬೇಕಾಗುತ್ತದೆ. ಅದಕ್ಕೆ ನಮಗೆ ಅವಕಾಶ ಮಾಡಿಕೊಡಿ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ: ನಮಗೂ ಚರ್ಚೆಗೆ ಅವಕಾಶ ಮಾಡಿ ಕೊಡಬೇಕು.

ಅಧ್ಯಕ್ಷರು: ಇಲ್ಲಿ ಇದರ ಬಗ್ಗೆ ಚರ್ಚೆಗೆ ಅವಕಾಶ ಇಲ್ಲ. ನಾನು ಪ್ರಶ್ನೋತ್ತರವನ್ನು ತೆಗೆದುಕೊಳ್ಳುತ್ತಿದ್ದೇನೆ.

ಶ್ರೀ ಬಸವರಾಜ ಬೊಮ್ಮಾಯಿ: This is very serious matter. We can't allow this.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ: ಯಾವುದೋ ಒಂದು ಸರ್ಕಾರದ ವಿರುದ್ಧ ಆರೋಪ ಮಾಡಿ ಒಳಗೆ ಸುಮ್ಮನೆ ಕುಳಿತುಕೊಳ್ಳಲು ಆಗುವುದಿಲ್ಲ. There is a limit for everything.

(ಗೊಂದಲ)

ಶ್ರೀ ಬಂಡೆಪ್ಪ ಕಾಶೆಂಪೂರ್: ಮಾನ್ಯ ಅಧ್ಯಕ್ಷರೆ, ದಯವಿಟ್ಟು ತಮ್ಮನ್ನು request ಮಾಡಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು: ಈಗ ಪ್ರಶ್ನೋತ್ತರಗಳನ್ನು ತೆಗೆದುಕೊಂಡಿದ್ದೇನೆ, ಆಗುವುದಿಲ್ಲ. ನಾನು ತಿರಸ್ಕರಿಸಿದ್ದೇನೆಂದು ಹೇಳಿದ್ದೇನಲ್ಲಾ?

ಶ್ರೀ ಬಂಡೆಪ್ಪ ಕಾಶೆಂಪೂರ್: ಮಾನ್ಯ ಅಧ್ಯಕ್ಷರೆ, ನಾನು ಎರಡು ನಿಮಿಷಗಳಲ್ಲಿ submit ಮಾಡುತ್ತೇನೆ.

ಅಧ್ಯಕ್ಷರು: ಎರಡು adjournment motion ಅನ್ನು ತೆಗೆದುಕೊಳ್ಳುವುದಕ್ಕೆ ಯಾವ ನಿಯಮದ ಅಡಿಯಲ್ಲಿದೆಯೆಂಬುದನ್ನು ಮೊದಲು ಹೇಳಿ? ನೀವು ನಿಮ್ಮ ಇಷ್ಟಕ್ಕೆ ಎಲ್ಲವನ್ನೂ ಮಾತನಾಡಬಹುದೆಂದರೆ I don't know how to conduct the House.

ಶ್ರೀ ಬಂಡೆಪ್ಪ ಕಾಶೆಂಪೂರ್: ಮಾನ್ಯ ಅಧ್ಯಕ್ಷರೆ, ಎಲ್ಲವನ್ನು ಅಲ್ಲ, ಮಾನ್ಯ ವಿರೋಧ ಪಕ್ಷದ ನಾಯಕರು ಕೊಟ್ಟಿದ್ದಾರೆ. ನಾವು ಎರಡು ನಿಮಿಷದಲ್ಲಿ submit ಮಾಡುತ್ತೇನೆ.

ಅಧ್ಯಕ್ಷರು: ಅವರು ಮೊದಲು ಕೊಟ್ಟಿದ್ದಾರೆ. I allowed it, ನಿಮಗೆ ಅವಕಾಶ ಕೊಡುವುದಕ್ಕೆ ಆಗುವುದಿಲ್ಲ. Where is the provision? ನೀವು ಹೇಳಿದ ಹಾಗೆ ನಿಯಮಾವಳಿಯನ್ನು ಬಿಟ್ಟು ಮಾಡಬೇಕಾ? ನೀವು ಕೇಳುವುದಕ್ಕೆ ನಿಯಮಾವಳಿ ಇದೆಯಾ?

ಶ್ರೀ ಬಂಡೆಪ್ಪ ಕಾಶೆಂಪೂರ್: ಇಲ್ಲ.

ಅಧ್ಯಕ್ಷರು: ಮತ್ತೆ ಏಕೆ ಮಾತನಾಡುತ್ತೀರಿ?

ಶ್ರೀ ಬಂಡೆಪ್ಪ ಕಾಶೆಂಪೂರ್: ತಾವು ಮನಸ್ಸು ಮಾಡಿದರೆ ಏನಾದರೂ ತೆಗೆದುಕೊಳ್ಳಬಹುದು, chance ಕೊಡಬಹುದು. ತಾವು ಮನಸ್ಸು ಮಾಡಿ ಎಂದು ಹೇಳುತ್ತಿದ್ದೇನೆ.

ಅಧ್ಯಕ್ಷರು: ನಾನು ಮನಸ್ಸು ಮಾಡಿಲ್ಲ.

ಶ್ರೀ ಕೆ.ಜೆ. ಜಾರ್ಜ್: ಮಾನ್ಯ ಅಧ್ಯಕ್ಷರೆ, ನಾನು ಸಹಿ ಮಾಡಿದ್ದೇನೆ. ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ಸಿದ್ದರಾಮಯ್ಯ: ನಾವು ಕೊಟ್ಟಿರುವಂಥ noticeಗೆ ಅವರು ಸಹಿ ಮಾಡಿದ್ದಾರೆ. ಅವರು ಎರಡು ನಿಮಿಷ ಮಾತನಾಡಲಿ.

ಅಧ್ಯಕ್ಷರು: ಅದು ಹೇಗೆ ಆಗುತ್ತದೆ? Matter close ಮಾಡಿದ್ದೇನೆ. ನಾನು ಇದನ್ನು ಮುಕ್ತಾಯ ಮಾಡಿ, ಇವತ್ತೇ ಆದೇಶ ಮಾಡುತ್ತೇನೆಂದು ಹೇಳಿದ್ದೇನೆ.

ಶ್ರೀ ಸಿದ್ಧರಾಮಯ್ಯ: ನೀವು ಆದೇಶ ಮಾಡುವುದಕ್ಕಿಂತ ಮುಂಚಿತವಾಗಿ let him make his points before you proceed for the orders.

ಅಧ್ಯಕ್ಷರು: ಆಯಿತು, ಹೇಳಿ.

ಶ್ರೀ ಬಂಡೆಪ್ಪ ಕಾಶೆಂಪೂರ್: ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ...

ಅಧ್ಯಕ್ಷರು: ತಾವು ಕುಳಿತುಕೊಳ್ಳಿ, ಎರಡು ನಿಲುವಳಿ ಸೂಚನೆಗೆ ಅವಕಾಶವಿಲ್ಲ. ನೀವು Joint ಆಗಿ ಕೊಡಲಿಲ್ಲ.

ಶ್ರೀ ಕೆ.ಜೆ. ಜಾರ್ಜ್: ಮಾನ್ಯ ಅಧ್ಯಕ್ಷರೆ, Justice ಸೋಮಶೇಖರ್‌ರವರು ಏನು ಹೇಳಿದ್ದಾರೆಂದರೆ...

ಶ್ರೀ ವಿ. ಸೋಮಣ್ಣ: ಮಾನ್ಯ ಅಧ್ಯಕ್ಷರೆ, ಮತ್ತೆ commission ವಿಚಾರಕ್ಕೆ ಹೋಗುವುದಾದರೆ...

ಅಧ್ಯಕ್ಷರು: ಮಾನ್ಯ ಜಾರ್ಜ್‌ರವರೆ Rule 60 ಅಡಿಯಲ್ಲಿ ಹೇಗೆ ಚರ್ಚೆಗೆ ಬರುತ್ತದೆಂಬುದನ್ನು ಮಾತ್ರ ಹೇಳುವುದಕ್ಕೆ ಅವಕಾಶವಿದೆ.

ಶ್ರೀ ಕೆ.ಜೆ. ಜಾರ್ಜ್: ಈ report ನಿಂದ ಇಡೀ ಕ್ರೈಸ್ತ ಸಮುದಾಯಕ್ಕೆ ಅನ್ಯಾಯವಾಗಿದೆ.

ಅಧ್ಯಕ್ಷರು: ದಾಖಲೆಗೆ ಹೋಗಬಾರದೆಂದು ಹೇಳಬೇಕಾಗುತ್ತದೆ.

ಶ್ರೀ ಕೆ.ಜಿ. ಜಾರ್ಜ್: ಪತ್ರಿಕೆಗಳಲ್ಲಿ ಎಲ್ಲಾ ಬಂದಿದೆ. ಇವತ್ತು ಡಾ: ಚಿದಾನಂದ ಮೂರ್ತಿಯವರು ಒಂದು ಮಾತನ್ನು ಹೇಳುತ್ತಾರೆ. ಕ್ರೈಸ್ತರು ಮತಾಂತರ ಮಾಡುವುದರಿಂದ ಹಿಂದೂ ಸಮಾಜವೇ...

ಅಧ್ಯಕ್ಷರು: ಆಯಿತು. ಇದು ದಾಖಲೆಗೆ ಹೋಗಬಾರದು.

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಾನ್ಯ ಸದಸ್ಯರ ಮಾತುಗಳನ್ನು ದಾಖಲಿಸಲಿಲ್ಲ).

(ಗೊಂದಲ)

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಾನ್ಯ ಸದಸ್ಯರಾದ ಶ್ರೀ ಕೆ.ಜಿ. ಜಾರ್ಜ್‌ರವರ ಮಾತುಗಳನ್ನು ದಾಖಲಿಸಿಕೊಂಡಿಲ್ಲ)

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ: ಈ ಎಲ್ಲ ವಿಚಾರಗಳು ಹಿಂದೆ ಒಂದು ಸಲ ಚರ್ಚೆಯಾಗಿವೆ. ಈಗ ಅದನ್ನೇ ಪುನರುಚ್ಚಾರ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಬಂಡೆಪ್ಪ ಕಾಶೆಂಪೂರ್: ಮಾನ್ಯ ಅಧ್ಯಕ್ಷರೆ, ನಾವೂ ಸಹ ನಮ್ಮ ಪಕ್ಷದ ವತಿಯಿಂದ ನಿಲುವಳಿ ಸೂಚನೆ ಕೊಟ್ಟಿದ್ದೇವೆ. ನಮಗೂ ಒಂದು ಅವಕಾಶ ಕೊಡಿ.

ಅಧ್ಯಕ್ಷರು: ಎರಡು ನಿಲುವಳಿ ಸೂಚನೆಗಳಿಗೆ ಯಾವ ನಿಯಮದಡಿ ಅವಕಾಶವಿದೆ ಎಂದು ನೀವು ಮೊದಲು ಹೇಳಿ.

ಶ್ರೀ ಬಂಡೆಪ್ಪ ಕಾಶೆಂಪೂರ್: ನಿಲುವಳಿ ಸೂಚನೆಯಿಲ್ಲದಿದ್ದರೆ ನಮಗೆ ಚರ್ಚೆಗೆ ಒಂದೆರಡು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು: ಚರ್ಚೆಗೆ ಅವಕಾಶ ಕೊಟ್ಟಿಲ್ಲ.

ಶ್ರೀ ಬಂಡೆಪ್ಪ ಕಾಶೆಂಪೂರ್: ಚರ್ಚೆಗೆ ಒಂದೆರಡು ನಿಮಿಷ ಅವಕಾಶ ಕೊಡಿ ಎಂದಷ್ಟೇ ಕೇಳುತ್ತಿದ್ದೇವೆ.

ಅಧ್ಯಕ್ಷರು: ಈ ರೀತಿ ಕೇಳಿದರೆ ನಾನು ಹೇಗೆ ಹೇಳುವುದು?

ಶ್ರೀ ಬಂಡೆಪ್ಪ ಕಾಶೆಂಪೂರ್: ಇದೂ ಇಲ್ಲ, ಅದೂ ಇಲ್ಲ ಎಂದರೆ ಹೇಗೆ ಅಧ್ಯಕ್ಷರೆ. ನಾವೂ ವಿರೋಧ ಪಕ್ಷದವರು. ನಮಗೆ ಅವಕಾಶ ಕೊಡದಿದ್ದರೆ ಹೇಗೆ?

ಅಧ್ಯಕ್ಷರು: ನಿಯಮಾವಳಿಯನ್ನು ಬಿಟ್ಟು ಮಾಡಬೇಕೇ?

ಶ್ರೀ ಬಂಡೆಪ್ಪ ಕಾಶೆಂಪೂರ್: ನಾವು ರಿಕ್ವೆಸ್ಟ್ ಮಾಡಿ ಕೇಳುತ್ತಿದ್ದೇವೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಈ ದೇಶದ ಅಲ್ಪಸಂಖ್ಯಾತರನ್ನು ಓಡಿಸಿಬಿಡಬೇಕು ಎಂದು ಮಾಡಿರುವಿರಾ?

ಶ್ರೀ ಬಸವರಾಜ ಬೊಮ್ಮಾಯಿ: ಅವರು ಈಗ ಕಾಂಗ್ರೆಸ್ ಬಿಟ್ಟು ನಮ್ಮ ಕಡೆ ಬಂದಿದ್ದಾರೆ.

(ಗೊಂದಲ)

ಶ್ರೀ ಬಂಡೆಪ್ಪ ಕಾಶೆಂಪೂರ್: ನಮ್ಮ ಮನಸ್ಸಿಗೆ ಬಹಳ ನೋವಾಗುತ್ತದೆ. ನಮಗೆ ಅವಕಾಶ ಕೊಡುವುದಿಲ್ಲವೆಂದರೆ ಹೇಗೆ?

(ಗೊಂದಲ)

ಶ್ರೀ ಸಿದ್ದರಾಮಯ್ಯ: ಇವತ್ತು ಬಹಳ ಗಂಭೀರವಾದಂಥ ಪರಿಸ್ಥಿತಿ ರಾಜ್ಯದಲ್ಲಿ ನಿರ್ಮಾಣವಾಗಿದೆ. ಇವತ್ತು ಕ್ರಿಶ್ಚಿಯನ್ ಸಮುದಾಯದವರ ಧಾರ್ಮಿಕ ಭಾವನೆಗಳಿಗೆ ನೋಂವುಂಟಾಗಿದೆ. ತಮಗೆ ರಕ್ಷಣೆ ಸಿಗುತ್ತಿಲ್ಲ ಎನ್ನುವ ಭಾವನೆ ಅವರಿಗೆ ಬಂದಿದೆ. ಅವರು ಇವತ್ತು ಆತಂಕದಲ್ಲಿ ಬದುಕುತ್ತಿದ್ದಾರೆ. ಇವರಿಗೆ ರಕ್ಷಣೆ ಕೊಡುವವರು ಯಾರು? ಅವರಿಗೆ ರಕ್ಷಣೆ ಕೊಡಬೇಕಾಗಿರುವುದು ಈ ಸರ್ಕಾರವಲ್ಲವೇ? ಅವರಿಗೆ ರಕ್ಷಣೆ ಕೊಡಬೇಕೋ, ಬೇಡವೋ ನೀವೇ ಹೇಳಿ. ರಕ್ಷಣೆ ಕೊಡಬೇಕು ಎನ್ನುವುದಾದರೆ ನೀವು ಚರ್ಚೆಗೆ ಅವಕಾಶ ಕೊಡಿ. ಇವರಂತೂ ಅವರಿಗೆ ರಕ್ಷಣೆ ಕೊಡುವುದಿಲ್ಲ. ನೀವಾದರೂ ಅವರ ರಕ್ಷಣೆಗೆ ಬರಬೇಕೋ, ಬೇಡವೋ? ನೀವಾದರೂ ಸಂವಿಧಾನವನ್ನು ಎತ್ತಿ ಹಿಡಿಯಬೇಕೋ, ಬೇಡವೋ? ಹೀಗೆಲ್ಲ ಮಾಡಿದರೆ ಇದು ಸಂವಿಧಾನದ ಚ್ಯುತಿಯಾಗುತ್ತದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಪ್ರತಿಯೊಬ್ಬರಿಗೂ ಸಂವಿಧಾನದಲ್ಲಿ ಸಂಪೂರ್ಣ ಸ್ವಾತಂತ್ರ್ಯ ಕೊಡಲಾಗಿದೆ. ಆದರೆ ಇವತ್ತು ಈ ಸರ್ಕಾರ ಅಲ್ಪಸಂಖ್ಯಾತರ ಬಗ್ಗೆ ಬೇಕು ಎಂದು ಉದ್ದೇಶಪೂರ್ವಕವಾಗಿಯೇ ಹೀಗೆ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ: ನಮ್ಮ ಸರ್ಕಾರದಲ್ಲಿರುವಷ್ಟು ಶಾಂತಿ, ಸುವ್ಯವಸ್ಥೆ ಯಾವ ಸರ್ಕಾರದಲ್ಲೂ ಇರಲಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಈ ಸರ್ಕಾರ ಸಂವಿಧಾನದ ಪ್ರಕಾರ ನಡೆಯುತ್ತಿಲ್ಲ.

(ಗೊಂದಲ)

ಶ್ರಿ ಸಿದ್ದರಾಮಯ್ಯ: ಅದಕ್ಕೋಸ್ಕರ ಇದರ ಬಗ್ಗೆ ಚರ್ಚೆ ಆಗಲೇಬೇಕು. ಸೋಮಶೇಖರ್‌ರವರು...

(ಗೊಂದಲ)

ಶ್ರೀ ಆರ್. ಅಶೋಕ್: ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆಗೆ ಯಾವುದೇ ರೀತಿಯಾದಂಥ ತೊಂದರೆಯಿಲ್ಲ. ಮೊನ್ನೆ ಕ್ರಿಶ್ಚಿಯನ್ ಸಮುದಾಯದವರು ನನ್ನನ್ನು ಭೇಟಿ ಮಾಡಿದ್ದರು, ನಾನು ಅವರಿಗೆ ಭರವಸೆ ಕೊಟ್ಟಿದ್ದೇನೆ, ಕಾನೂನು ಮತ್ತು ಸುವ್ಯವಸ್ಥೆಗೆ ಯಾವುದೇ ರೀತಿ ತೊಂದರೆ ಯಾಗುವುದಿಲ್ಲ, ಎಲ್ಲವೂ ಸರಿ ಇದೆ ಎನ್ನುವ ಮಾತನ್ನು ಅವರಿಗೆ ಹೇಳಿದ್ದೇನೆ. ಕಾಂಗ್ರೆಸ್‌ನವರ ತರಹ ಓಟಿಗೋಸ್ಕರ ಪಾಲಿಟಿಕ್ಸ್ ಮಾಡುವವರಲ್ಲ ನಾವು. ಯಾವುದೇ ಒಂದು ಸಮುದಾಯವನ್ನು ಎತ್ತಿ ಕಟ್ಟುವಂಥ ಅವಶ್ಯಕತೆ ನಮಗಿಲ್ಲ.

ಶ್ರೀ ಸಿದ್ದರಾಮಯ್ಯ: ಯಾವುದೇ ಚರ್ಚೆಗೆ ಅವಕಾಶ ಕೊಡದಂತೆ ಅವರು ಎದ್ದು ನಿಂತುಕೊಂಡು ಮಾತನಾಡುತ್ತಿದ್ದಾರೆ. ಆದ್ದರಿಂದ ನಮಗೆ ಚರ್ಚೆಗೆ ಅವಕಾಶ ಮಾಡಿಕೊಡಬೇಕು ಎಂದು ಮಾನ್ಯ ಅಧ್ಯಕ್ಷರಲ್ಲಿ ಮನವಿ ಮಾಡುತ್ತಿದ್ದೇವೆ.

2. ಅಧ್ಯಕ್ಷರ ತೀರ್ಪು

ಅಧ್ಯಕ್ಷರು: ನ್ಯಾಯಮೂರ್ತಿ ಬಿ.ಕೆ. ಸೋಮಶೇಖರ್ ಆಯೋಗ ಸರ್ಕಾರಕ್ಕೆ ಸಲ್ಲಿಸಿರುವ ಮಧ್ಯಂತರ ವರದಿ ಹಾಗೂ ಅಂತಿಮ ವರದಿಗಳು ಇತ್ತೀಚೆಗೆ ನಡೆದ ಘಟನೆಯಾಗಿರುವುದಿಲ್ಲ. ಅಲ್ಲದೇ, ಸದರಿ ವರದಿಗಳು ಸರ್ಕಾರದ ಮುಂದೆ ಇದ್ದು ಅವುಗಳ ಬಗ್ಗೆ ಸರ್ಕಾರ ತನ್ನ ಕ್ರಮವನ್ನು ತೆಗೆದು ಕೊಳ್ಳಬೇಕಾಗಿದೆ. ಆದ್ದರಿಂದ, ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಇತರ ಸದಸ್ಯರು ತಂದಿರುವ ನಿಲುವಳಿ ಸೂಚನೆಯು ಸದರಿ ನಿಯಮಗಳಡಿ ಬಾರದೇ ಇರುವುದರಿಂದ ನಿಲುವಳಿ ಸೂಚನೆಗೆ ಅನುಮತಿಯನ್ನು ನಿರಾಕರಿಸಿದೆ.

ಶ್ರೀ ಸಿದ್ದರಾಮಯ್ಯ: ನಾವು ನಿಮಗೆ ಕನ್ವಿನ್ಸ್ ಮಾಡಲು ಪ್ರಯತ್ನ ಮಾಡಿದೆವು. ನೀವು ಈ ರೀತಿ ಆರ್ಡರ್ ಮಾಡಿ ಬಿಟ್ಟರೆ ಆ ಜನ ಎಲ್ಲಿಗೆ ಹೋಗಬೇಕು? ಹಾಗಾದರೆ, ಸಂವಿಧಾನವನ್ನು ಏಕೆ ಇಟ್ಟುಕೊಳ್ಳಬೇಕು? ಈ ಸರ್ಕಾರ ಏಕೆ ಬರಬೇಕು?